**ಕರ್ನಾಟಕ ಜೀವವೈವಿಧ್ಯ ಮಂಡಳಿ**

# Karnataka Biodiversity Board

**39ನೇ ಮಂಡಳಿ ಸಭೆಯ ಕಾರ್ಯಸೂಚಿಗಳು**

# Agenda notes for 39th Board Meeting

**39/1 – 38 ನೇ ಮಂಡಳಿ ಸಭೆಯ ನಡವಳಿಗಳನ್ನು ಓದುವುದು ಮತ್ತು ದಾಖಲಿಸುವುದು:**

ದಿನಾಂಕ 26/07/2018ರಂದು ಜರುಗಿದ ಮಂಡಳಿಯ 38ನೇ ಸಭೆಯ ನಡವಳಿಗಳನ್ನು ಎಲ್ಲಾ ಸದಸ್ಯರಿಗೆ ದಿ: 03/08/2018ರಂದು ರವಾನಿಸಲಾಗಿದ್ದು, ಮಂಡಳಿಯ ಅಧಿಕಾರೇತರ ಸದಸ್ಯರುಗಳಾದ ಡಾ. ನಿರಂಜನ ಮೂರ್ತಿ, ಪ್ರೋಫೆಸರ್ ಅಂಡ್ ಸ್ಕೀಮ್ ಹೆಡ್, ಎ.ಐ.ಸಿ.ಆರ್.ಎನ್ ಆನ್ ಪೊಟೆನ್ಸಿಯಲ್ ಕ್ರಾಪ್ಸ್, ಜಿಕೆವಿಕೆ ಇವರುಗಳ ಸಲಹೆಯ ಮೇರೆಗೆ ಅಜೆಂಡಾ ಸಂ.38/3 (3), 38/11 ಮತ್ತು 38/15ರಲ್ಲಿನ ವಿಷಯಗಳನ್ನು ತಿದ್ದುಪಡಿಗೊಳಿಸಿ ಅಂತಿಮ ನಡವಳಿಯನ್ನು ದಿನಾಂಕ: 10/08/2018ರಂದು ರವಾನಿಸಲಾಗಿತ್ತು.

ಈ ಬಗ್ಗೆ ಯಾವುದೇ ತಿದ್ದುಪಡಿ ಬಂದಿಲ್ಲದ ಕಾರಣ ಈ ನಡವಳಿಗಳನ್ನು ಓದಿ ದಾಖಲಿಸಲಾಗಿದೆ. **(ಅನುಬಂಧ– I)**

## 39/1-Reading and recording of Proceedings of the 38th Board Meeting.

The Proceedings of the 38th Board meeting held on 26/07/2018 were communicated to all the members on 03/08/2018. The comments on Agenda 38/3 (3), 38/11 and 38/15 received from Dr. Niranjana Murthy, Prof & Scheme Head, AICRN on Potential Crops, GKVK, was incorporated and the final proceedings have been sent to all members on 10/08/2018.

As there were no comments from the members, the proceedings may be adopted. **(Annexure-I - Page No-8-12)**

**39/2 – 38ನೇ ಮಂಡಳಿ ಸಭೆಯ ನಡವಳಿಯ ಮೇಲೆ ಕೈಗೊಂಡ ಕ್ರಮಗಳು:**

38ನೇ ಮಂಡಳಿ ಸಭೆಯ ನಡವಳಿಯ ಮೇರೆಗೆ ಕೈಗೊಂಡ ಕ್ರಮಗಳನ್ನು ಸಭೆಗೆ ಮಂಡಿಸಲಾಗಿದೆ. **(ಅನುಬಂಧ–II)**

## 39/2 - Action taken on 38th Board meeting proceedings.

Action taken on proceedings of 38th Board meeting is placed in **(Annexure-II - Page No-13-18)**

**39/3 – ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ ಹಾಗೂ ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಪ್ರಗತಿ.**

1. ಜುಲೈ 2018 ರಿಂದ ಆಗಸ್ಟ್ 2018ರವರೆಗೆ, 2 ಜಿಲ್ಲಾ ಮಟ್ಟದ 1 ತಾಲ್ಲೂಕು ಮಟ್ಟದ ಹಾಗೂ 3 ಗ್ರಾಮ ಪಂಚಾಯತಿ ಮಟ್ಟದಲ್ಲಿ ಒಟ್ಟು 6 ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಈವರೆಗೆ 6023 ಗ್ರಾಮ ಪಂಚಾಯತಿಗಳಲ್ಲಿ 4961 ಗ್ರಾಮ ಮಟ್ಟದ, 176 ತಾಲ್ಲೂಕುಗಳಲ್ಲಿ 139 ತಾಲ್ಲೂಕು ಮಟ್ಟದ ಹಾಗು 30 ಜಿಲ್ಲೆಗಳಲ್ಲಿ 16 ಜಿಲ್ಲಾ ಪಂಚಾಯತಿ ಮಟ್ಟದ ಒಟ್ಟು 5116 ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಲಾಗಿರುತ್ತದೆ.

2. ಜುಲೈ 2018 ರಿಂದ ಆಗಸ್ಟ್ 2018ರವರೆಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ 34 ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಲಾಗಿರುತ್ತದೆ. ಈವರೆಗೆ 1854 ಗ್ರಾಮ ಪಂಚಾಯತಿ ಮಟ್ಟದ ಹಾಗೂ 24 ತಾಲ್ಲೂಕು ಮಟ್ಟದ ಒಟ್ಟು 1878 ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಲಾಗಿರುತ್ತದೆ. **(ಅನುಬಂಧ –III)**

ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಮಂಡಿಸಲಾಗಿದೆ.

**39/3-Status of Formation of Biodiversity Management Committees (BMC) and Preparation of People's Biodiversity Registers (PBR):**

1. From July to August 2018, 2 District level, 1 Taluka level and 3 Grama Panchayat level BMCs, totalling to 6 BMCs, have been constituted. Till date 4961 GP BMCs out of 6023 GPs and 139 Taluk Panchayat (TP) BMCs out of 176 TPs and 16 Zilla Panchayat (ZP) BMCs out of 30 ZPs, totalling to **5116** BMCs have been constituted in the State.
2. From July to August 2018, 34 PBRs at GP level have been prepared. Till date, 1854 PBRs at GP level and 24 PBRs at TP level, totalling to **1878** PBRs have been documented. **(Annexure-III - Page No-65)**

The subject is placed before the Board for information.

**39/4 – ಸಹಾಯಕ ಸಿಬ್ಬಂದಿಗಳ ವೇತನ ಹೆಚ್ಚಳ:**

ಸಹಾಯಕ ಸಿಬ್ಬಂದಿಗಳ ವೇತನವನ್ನು ವಾರ್ಷಿಕ ಮುಂಬಡ್ತಿಗೆ ಅನುಗುಣವಾಗುವಂತೆ ಹೆಚ್ಚಿಸಬೇಕೆಂದು ಮಂಡಳಿಯ 38ನೇ ಸಭೆಯಲ್ಲಿ ವಿಷಯ 38/11 ರಲ್ಲಿ ಚರ್ಚಿಸಲಾಯಿತು. ಅದರಂತೆ, ಹೊರಗುತ್ತಿಗೆ ಸಂಸ್ಥೆಯ ಕರಾರು ಒಪ್ಪಂದದ ಕ್ರಮ ಸಂಖ್ಯೆ. 27ರಲ್ಲಿ ನಮೂದಿಸಿರುವಂತೆ "The Client reserves the right of re-fixing or revising the rates of remuneration payable to the personnel". ಇದಕ್ಕೆ ಅನುಗುಣವಾಗಿ ಹಾಗೂ ಮಂಡಳಿಯ ಅಧ್ಯಕ್ಷರ ಅನುಮೋದನೆ

ನೀಡಿರುವಂತೆ, ಹೊರಗುತ್ತಿಗೆ ನೌಕರರ ವೇತನವನ್ನು ದಿನಾಂಕ 01/07/2018 ರಿಂದ ಅನ್ವಯಿಸುವಂತೆ ಶೇಕಡ 10% ಹೆಚ್ಚಳ ಮಾಡಬಹುದಾಗಿರುತ್ತದೆ.

ಈ ವಿಷಯವನ್ನು ಮಂಡಳಿಯ ಅನುಮೋದನೆಗೆ ಸಲ್ಲಿಸಲಾಗಿದೆ. **(ಅನುಭಂದ – IV)**

## 39/4 – Salary Enhancement of Supporting Staff:

The matter on enhancement of the Salary of Supporting Staff was discussed in the 38th Board meeting under the subject 38/11.

As per the Agreement with the outsourcing agency, under point No. 27, it is mentioned that "The Client reserves the right of re-fixing or revising the rates of remuneration payable to the personnel". Therefore, as approved by the Chairman, Karnataka Biodiversity Board, the salary of outsource employees may be enhanced by 10% with effect from 01/07/2018.

The matter is put up for Board's approval.**(Annexure–IV- Page No-66-69)**

### 39/5 – ಸಂಶೋಧನಾ ಸಹಾಯಕರ (ಪ್ರಾಣಿಶಾಸ್ತ್ರ) ರವರ ವೇತನ ಹೆಚ್ಚಳ:

ಸಹಾಯಕ ಸಂಶೋಧಕರ (ಪ್ರಾಣಿಶಾಸ್ತ್ರ) ವೇತನ ಹೆಚ್ಚಳದ ವಿಷಯವನ್ನು ಮಂಡಳಿಯ ಸಂಶೋಧನಾ ವಿಭಾಗದ ತಾಂತ್ರಿಕ ಪರಿಣಿತರ ಸಮಿತಿಯ ದಿನಾಂಕ 21/06/2018ರಂದು ನಡೆದ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ. ಸಮಿತಿಯ ಸದಸ್ಯರುಗಳು ಹಾಗೂ ಮಂಡಳಿಯ ಗೌರವಾನ್ವಿತ ಸದಸ್ಯರುಗಳು ನೀಡಿದ ಸಲಹೆಗಳಂತೆ ಮತ್ತು ಅಧ್ಯಕ್ಷರು, ಕರ್ನಾಟಕ ಜೈವಿಕವೈವಿಧ್ಯ ಮಂಡಳಿರವರ ಅನುಮೋದನೆಯಂತೆ, ದಿನಾಂಕ 01/07/2018ರಂದು ಅನ್ವಯಿಸುವಂತೆ ಸಹಾಯಕ ಸಂಶೋಧಕರ (ಪ್ರಾಣಿಶಾಸ್ತ್ರ) ವೇತನವನ್ನು ಮಾಸಿಕ 45,000/- ರೂಪಾಯಿಗಳನ್ನು ನೀಡಬಹುದಾಗಿದೆ. ತಾಂತ್ರಿಕ ಪರಿಣಿತರ ಸಮಿತಿಯ ಸಭೆಯ ನಡವಳಿಗಳನ್ನು ಹಾಗೂ ಮಂಡಳಿಯ ಅಧ್ಯಕ್ಷರ ಅನುಮೋದನೆಯನ್ನು **(ಅನುಭಂದ – V)** ರಲ್ಲಿ ಮಂಡಿಸಲಾಗಿದೆ.

ಈ ವಿಷಯವನ್ನು ಮಂಡಳಿಯ ಚರ್ಚೆಗೆ ಹಾಗೂ ಅನುಮೊದನೆಗೆ ಸಲ್ಲಿಸಿದೆ.

## 39/5 – Salary Enhancement of Research Associate (Zoology):

The matter on enhancement of salary of Research Associate (Zoology) was deliberated in the meeting of Technical Expert Committee on Research held on 21/06/2018. As per the suggestions of Members of the committee, who are also the honorable Members of Karnataka Biodiversity Board and the subsequent approval by Chairman, Karnataka Biodiversity Board, the emoluments of Research Associate (Zoology) may be fixed at Rs.45,000/- per month with effect from 01/07/2018. The resolutions of the Technical Expert Committee & Chairman's approval is placed as **(Annexure – V - Page No-70-73)**

The matter is put up for deliberation and approval of the Board.

**39/6: ಕರ್ನಾಟಕ ಜೈವಿಕವೈವಿಧ್ಯ ನಿಯಮ 2005ರ ನಿಯಮ 15ರ ತಿದ್ದುಪಡಿ:**

ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 25 ಇಎನ್‌ವಿ 2018 ದಿನಾಂಕ 10/08/2018ರಂತೆ ಕರ್ನಾಟಕ ಜೈವಿಕವೈವಿಧ್ಯ ನಿಯಮ 2005ರ ನಿಯಮ 15ನ್ನು ತಿದ್ದುಪಡಿ ಮಾಡಲಾಯಿತು. ಅಧಿಸೂಚನೆಯಂತೆ ನಿಯಮ 15 ಹಾಗೂ ಫಾರಂ –1 ನಮೂನೆಗಳನ್ನು ಮಾರ್ಪಡಿಸಿ ಕರ್ನಾಟಕ ಜೈವಿಕವೈವಿಧ್ಯ 2005ರ ನಿಯಮ (ತಿದ್ದುಪಡಿ)ದೊಂದಿಗೆ ಮಂಡಳಿಯ ಮಾಹಿತಿಗಾಗಿ ಸಲ್ಲಿಸಲಾಗಿದೆ **(ಅನುಬಂಧ–VI)**

## 39/6 - Amendment to the Rule 15 of the Karnataka Biological Diversity Rules, 2005:

The Rule 15 of the Karnataka Biological Diversity Rules, 2005, was amended vide notification no. FEE 24 ENV 2018 dated 10/08/2018. As per the notification, Rule 15 and the Form-I pro forma has been substituted with the Karnataka Biological Diversity (Amendment) Rules, 2018 **(Annexure-VI - Page No-75-77)**

The matter is put up for the information of the Board.

**39/7 – ಪ್ರಧಾನ ಹರ್ಬಲ್ ಕಂಪೆನಿ ವಿರುದ್ಧ ದೂರಿನ ವಿಲೇವಾರಿ: ಜೈವಿಕವೈವಿಧ್ಯ ಅಧಿನಿಯಮ 2002 ರ ಸೆಕ್ಷನ್ 7 ಮತ್ತು 24 ಹಾಗೂ** ಕರ್ನಾಟಕ ಜೈವಿಕವೈವಿಧ್ಯ ನಿಯಮ 2005ರ ನಿಯಮ 15ರಂತೆ ಪೂರ್ವಾನುಮತಿ ಪಡೆಯದೆ ಜೈವಿಕ ಸಂಪನ್ಮೂಲಗಳನ್ನು ಬಳಸುತ್ತಿರುವ ಕಂಪೆನಿಗಳ ವಿರುದ್ಧ ದೂರನ್ನು ದಾಖಲಿಸಲಾಗುತ್ತಿದೆ. ಅದರಂತೆ ಮೆ. ಪ್ರಧಾನ ಹರ್ಬಲ್ ಕಂಪೆನಿ (ಸಿ.ಸಿ. 6424/2018) ಬೆಂಗಳೂರಿನ 22ನೇ ಎಸಿಎಂಎಂನಡಿಯಲ್ಲಿ ದಿನಾಂಕ 25/08/2018ರಂದು ದೂರನ್ನು ವಿಲೇವಾರಿ ಮಾಡಲಾಯಿತು. **(ಅನುಬಂಧ – VII)**

ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಮಂಡಿಸಲಾಗಿದೆ.

## 39/7-Disposal of complaint filed against M/s. Pradhan Herbal Company:

The complaint filed, for non-submission of prior intimation for access to bio-resources (in Form-I) as per section 7 and 24 of the Biological Diversity Act, 2002 and Rule 15 of the Karnataka Biological Diversity Rules, 2005, against M/s. Pradhan Herbal Company (vide C.C. 6424/2018) before the 44th ACMM, Bangalore, was disposed off on 25th August 2018. **(ANNEXURE – VII - Page No-78-79).**

The matter is put up for the information of the Board.

**39/7 –ಯುಎನ್‌ಇಪಿ–ಜೆಫ್–ಎಂಒಇಎಫ್–ಎಬಿಎಸ್ "ಜೈವಿಕ ಅಧಿನಿಯಮ, 2002 ಮತ್ತು ನಿಯಮಗಳ ಅಡಿಯಲ್ಲಿ ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭ ಹಂಚಿಕೆ ಸಂಬಂಧಿತ ನಿಬಂಧನೆಗಳ ಜಾರಿ ಮತ್ತು ಸಾಮರ್ಥ್ಯ ವರ್ಧನೆ"**

**1 ಕಾನೂನು ಕಾರ್ಯಗಾರ:** ದಿನಾಂಕ 06/08/2018ರಂದು ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ವಿಶ್ವವಿದ್ಯಾಲಯದಲ್ಲಿ ಜೈವಿಕವೈವಿಧ್ಯ ಅಧಿನಿಯಮ 2002ರ ಕಾಯಿದೆಯಡಿಯಲ್ಲಿ ಕಾನೂನು ಮತ್ತು ಅನುಸರಣೆ ಎಂಬ ವಿಷಯದ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾಯಿದೆಯಡಿಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳು, ಕೊರತೆಗಳು ಮತ್ತು ನಿಬಂಧನೆಗಳನ್ನು ಜಾರಿಗೊಳಿಸುವಲ್ಲಿ ಎದುರಾದ ತೊಂದರೆಗಳು, ಭವಿಷ್ಯದಲ್ಲಿ ಈ ವಿಷಯದ ಬಗ್ಗೆ ಚರ್ಚಿಸಲು, ಅಗತ್ಯವಿದ್ದಾಗ ಅಭಿಪ್ರಾಯಗಳನ್ನು ಪಡೆಯಲು ಕಾನೂನು ಸಲಹಾ ಸಮಿತಿಯನ್ನು ರಚಿಸಲಾಗಿದೆ. ಅಧಿನಿಯಮದ ನಿಬಂಧನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಾನೂನು ವಿಷಯಗಳಲ್ಲಿ ಮಂಡಳಿಗೆ ಸಲಹೆಯನ್ನು ನೀಡುವ ಒಂದು ಸಮಿತಿಯನ್ನೂ ಸಹಾ ರಚಿಸಲಾಗಿದೆ.

2. **ಜಿಲ್ಲಾ ಮಟ್ಟದಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ:**

ಜೈವಿಕವೈವಿಧ್ಯ ಅಧಿನಿಯಮ 2002ರ ಸೆಕ್ಷನ್ 41(1)ರಂತೆ ಪ್ರತಿ ಸ್ಥಳೀಯ ಸಂಸ್ಥೆಯಲ್ಲಿ ಕಡ್ಡಾಯವಾಗಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಬೇಕಾಗಿರುತ್ತದೆ. ಅದರಂತೆ 5 ಜಿಲ್ಲೆಗಳಾದ ಬೆಳಗಾವಿ, ಉಡುಪಿ, ದಕ್ಷಿಣ ಕನ್ನಡ, ರಾಮನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಿದ್ದು ಈ ಸಮಿತಿಗಳಿಗೆ ಪ್ರಾರಂಭಿಕ ನಿಧಿಯನ್ನು ಬಿಡುಗಡೆಗೊಳಿಸಲು ಯೋಜಿಸಲಾಗಿದೆ.

**3. ಕೇಂದ್ರೀಕೃತ ಗುಂಪು ಸಭೆ:**

ದಿನಾಂಕ 30/07/2018ರಂದು ನ್ಯೂಟ್ರಾಸ್ಯುಟಿಕಲ್ ಮತ್ತು ಕಾಸ್ಮೆಟಿಕ ಸೆಕ್ಟರ್‌ಗಳಿಗೆ ಜೈವಿಕವೈವಿಧ್ಯ ಅಧಿನಿಯಮ 2002ರ ನಿಬಂಧನೆಗಳ ಮೇಲೆ ಕೈಗಾರಿಕೆಗಳು / ಕ್ಷೇತ್ರಗಳನ್ನು ಸಂವೇದನೆಗೊಳಿಸಲು ಮತ್ತು ಕ್ಷೇತ್ರದ ಸವಾಲುಗಳನ್ನು ಉತ್ತಮ ಮಟ್ಟದಲ್ಲಿ ಅರಿಯಲು ಗುಂಪು ಸಭೆಯನ್ನು ಏರ್ಪಡಿಸಿತ್ತು. ವಲಯಗಳಿಂದ ನಿಬಂಧನೆ ಅನುಸರಣೆಗೆ ಸಂಬಂಧಿಸಿದಂತೆ ಕಡಿಮೆ ಪ್ರತಿಕ್ರಿಯೆಗಳು ಬಂದವು.

**4. ಅಂತರ ಜಿಲ್ಲೆ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸಭೆ:**

10ನೇ ಸೆಪ್ಟೆಂಬರ್ 2018ರಂದು, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ (ಐಎಸ್‌ಇಸಿ) ಬೆಂಗಳೂರಿನಲ್ಲಿ ಜೀವವೈವಿಧ್ಯ ನಿರ್ವಹಣೆ, ಸಂರಕ್ಷಣೆಯ ಪ್ರಾಮುಖ್ಯತೆ ಮತ್ತು ಜೈವಿಕ ಸಂಪನ್ಮೂಲಗಳ ಸಮರ್ಥನೀಯ ಬಳಕೆ ಮತ್ತು ಜನತಾ ಜೀವವೈವಿಧ್ಯ ದಾಖಲಾತಿಗಳ ಪಾತ್ರದ ಉದ್ದೇಶಗಳ ಬಗ್ಗೆ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಅರಿವನ್ನುಂಟು ಮಾಡಲು ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಮಂಡಿಸಲಾಗಿದೆ.

**39/7-UNEP-GEF-MoEF-ABS Project on "Strengthening the implementation of the Biological Diversity Act and Rules with focus on its ABS Provisions"**

1. **Legal Workshop:** A one day workshop on "Law and Compliance under Biological Diversity Act, 2002 with special reference to the State of Karnataka" was organized at National Law School of India University, Bengaluru on 6th August 2018 in order to understand and deliberate on the compliance related challenges faced by the Board in implementation and interpretation of the Act, the deficiencies in BD legislations and difficulties posed in enforcement of the provisions of the Act. To continue with the discussions in future and to seek legal opinion whenever required, a **LEGAL ADVISORY GROUP** is also constituted, a committee to support the Board in legal matters for the effective implementation of the provisions of the Act.
2. **Constitution of Biodiversity Management Committees at the District Level:** With reference to Section 41 (1) of Biological Diversity Act, 2002, every local body should constitute a Biodiversity Management Committee falling within its area of jurisdiction. Constitution of five Biodiversity Management Committees has been facilitated one each at Belagavi, Udupi, Dakshina Kannada, Ramanagara and Mandya districts. To sanction startup fund to these five ZP level BMCs, constitution of Local Biodiversity Fund is also facilitated in these five places.
3. **Focus group meeting:**
   A focus group meeting with Neutraceutical and Cosmetic sector was held on 30-07-2018 to sensitize the industries/sectors on the provisions of the Biological Diversity Act, 2002 and also to get a deeper insight into the challenges of the sector and to understand the reasons behind poor response from the sector on compliance.
4. **Intrastate BMC conglomeration:** A one day workshop on "Intrastate conglomeration of district level Biodiversity Management Committees" was held on 10th September 2018 at the Institute of Social and Economic Change (ISEC), Bengaluru to create awareness among the members of Biodiversity Management Committees on the importance of conservation and sustainable utilization of biological resources and the role of People's Biodiversity Registers in realizing the objectives of the Act
   The same is submitted for the information of the Board.

**39/8 – ಸ್ಮರಣ ಸಂಚಿಕೆ ಹಾಗೂ 2017–18ನೇ ಸಾಲಿನ ವಾರ್ಷಿಕ ವರದಿ ಹಾಗೂ ಆಡಿಟೆಡ್ ವರದಿ 2016–17ರ ತಯಾರಿಕೆ:**

ಕರ್ನಾಟಕ ಜೀವವೈವಿಧ್ಯ ಮಂಡಳಿಯು ಪ್ರಾರಂಭದಿಂದ ಈವರೆಗಿನ 15 ವರ್ಷಗಳ ಸಾಧನೆ ಕುರಿತ ಘಟನಾವಳಿಗಳ ಸ್ಮರಣ ಸಂಚಿಕೆ ಮತ್ತು 2017–18ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕ ಪರಿಶೋಧನೆ 2016–17ರ ವರದಿಯನ್ನು ತಯಾರಿಸಿದೆ.

ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಮಂಡಿಸಿದೆ.

**39-8 - Souvenir and Annual Report 2017-18 and Audited Accounts Report for the year 2016-17.**

Karnataka Biodiversity Board has prepared a Souvenir highlighting the 15 years of inception of the Board. The Annual Report for the year 2017-18 and Audited Accounts Report for the year 2016-17 has also been prepared.

The same is submitted for the information of the Board.

**39/9– ಅಧ್ಯಕ್ಷರ ಅನುಮೋದನೆ ಮೇರೆಗೆ ಇತರೆ ಯಾವುದಾದರೂ ವಿಷಯಗಳು.**

**39/9 - Any other subject with the permission of the Chair.**

**ಅಧ್ಯಕ್ಷರು**
**ಕರ್ನಾಟಕ ಜೀವವೈವಿಧ್ಯ ಮಂಡಳಿ**

**ಸದಸ್ಯ ಕಾರ್ಯದರ್ಶಿ**
**ಕರ್ನಾಟಕ ಜೀವವೈವಿಧ್ಯ ಮಂಡಳಿ**